## ಇನ್ನೊಂದು ಮುಖ...

ಹಾಸ್ಟೆಲ್ ಜೀವನ ಮಕ್ಕಳಲ್ಲಿ ಶಿಸ್ತಿನ ಜೀವನ ರೂಪಿಸುತ್ತದೆ ಎನ್ನುವುದು ಸಾಮಾನ್ಯ ನಂಬಿಕೆ. ಆದರೆ, ಕೆಲವು ಮಕ್ಕಳು ಹಾಸ್ಟೆಲ್‌ಗಳಲ್ಲಿ ಸ್ವೇಚ್ಛಾಚಾರಿಗಳಾಗಿ ರೂಪುಗೊಳ್ಳುವುದೂ ಇದೆ ಎಂದು ಹಾಸ್ಟೆಲ್ ವಾಸ ಅನುಭವಿಸಿ ಬಂದಿರುವ ವಿದ್ಯಾರ್ಥಿಯೊಬ್ಬರು ಹೇಳುತ್ತಾರೆ. “ಕೆಲವು ಉಢಾಳರಂತೂ ಹಾಸ್ಟೆಲ್‌ನಿಂದ ತರಗತಿಗಳಿಗೆ ಹೋಗುವ ಬದಲು, ಉಪಸಂಪಾದನೆಯ ವೃತ್ತಿಗಳಿಗೆ ಹೋಗುತ್ತಾರೆ. ಅಮಲು ಪದಾರ್ಥಗಳ ಸೇವನೆಯ ವ್ಯಸನವನ್ನು ಅಂಟಿಸಿಕೊಳ್ಳುವವರಿದ್ದಾರೆ. ಸಮಾಜಘಾತುಕ ಚಟುವಟಿಕೆಗಳಲ್ಲಿ ಗುರ್ತಿಸಿಕೊಳ್ಳುವವರಿದ್ದಾರೆ. ಇಂಥ ‘ವಿದ್ಯಾರ್ಥಿ’ಗಳು ವಾರ್ಡನ್‌ಗಳನ್ನೇ ಹೆದರಿಸುತ್ತಾರೆ. ಅವರ ಚಟುವಟಿಕೆಗಳನ್ನು ನಾವು ಕಂಡೂ ಕಾಣದಂತೆ ಸುಮ್ಮನಿರಬೇಕಾಗುತ್ತದೆ” ಎನ್ನುವ ಅವರ ಮಾತಿನಲ್ಲಿ ಅಸಹಾಯಕತೆ ಇಣುಕುತ್ತದೆ.

ಸೇತುಗಳಾಗಿ ಮೊಬೈಲ್ ಫೋನ್ ಹಾಗೂ ಸ್ಕೈಪ್‌ಗಳಿವೆ. ಹಾಗಾಗಿ ಮಕ್ಕಳು ಕುಟುಂಬದಿಂದ ದೂರವಿರುವ ಒತ್ತಡವನ್ನು ಅನುಭವಿಸುವುದಿಲ್ಲ ಎನ್ನುವ ವಾದಗಳಿವೆ.

### ಶಿಸ್ತಿನ ಸೆರೆಮನೆ

ವಾರ್ಷಿಕವಾಗಿ ಲಕ್ಷಾಂತರ ರೂಪಾಯಿ ಶುಲ್ಕ ವಸೂಲಿ ಮಾಡುವ ಐಷಾರಾಮಿ ಹಾಸ್ಟೆಲ್‌ಗಳೂ ಇವೆ. ಇವೊಂದು ಬಗೆಯಲ್ಲಿ ತಾರಾ ವರ್ಚಸ್ಸಿನ ಹೋಟೆಲ್‌ಗಳಿದ್ದಂತೆ. ಆದರೆ, ಜನಸಾಮಾನ್ಯರ ನಡುವೆ ಹೆಚ್ಚು ಜನಪ್ರಿಯಗೊಂಡಿರುವುದು ಶಿಸ್ತಿಗೆ ಒತ್ತು ನೀಡುವ ವಿದ್ಯಾರ್ಥಿ ನಿಲಯಗಳು. ಪಿಯುಸಿ ವಿದ್ಯಾರ್ಥಿಗಳ ಕೆಲವು ವಸತಿಶಾಲೆಗಳ ಪ್ರಖ್ಯಾತಿ ಎಷ್ಟಿದೆಯೆಂದರೆ, ಆ ಶಾಲೆಗಳಲ್ಲಿ ಮಕ್ಕಳಿಗೆ ಸೀಟು ದೊರೆಯುವುದು ತಮ್ಮ ಭಾಗ್ಯವೆಂದು ಭಾವಿಸುವ ಪೋಷಕರಿದ್ದಾರೆ. ಈ ಕಾಲೇಜುಗಳು ಲಕ್ಷಾಂತರ ರೂಪಾಯಿ ಶುಲ್ಕ ವಿಧಿಸುತ್ತವೆ; ಜೊತೆಗೆ ಮೆರಿಟ್ ಅನ್ನೂ ಬಯಸುತ್ತವೆ. ಜಾಣ ವಿದ್ಯಾರ್ಥಿಗಳನ್ನು ಸರ್ಕಸ್ ಪ್ರಾಣಿಗಳಂತೆ ಪಳಗಿಸಿ ಅಂಕಪಟ್ಟಿಗಳಲ್ಲಿ ಹೆಚ್ಚು ಅಂಕಗಳನ್ನು ಕಾಣಿಸುವ ಜಾಣತನ ಈ ಸಂಸ್ಥೆಗಳದು.

ವಸತಿ ಶಾಲೆಗಳು ರಾಜಾರೋಷವಾಗಿ ಕಾರ್ಯನಿರ್ವಹಿಸುತ್ತಿದ್ದರೂ ಅವುಗಳಲ್ಲಿ ಬಹುತೇಕ ಸಂಸ್ಥೆಗಳು ವಿದ್ಯಾರ್ಥಿ ನಿಲಯಗಳನ್ನು ನಡೆಸಲಿಕ್ಕಾಗಿ ಪರವಾನಗಿಯನ್ನೇ ಪಡೆದಿರುವುದಿಲ್ಲ. ನಮ್ಮ ಮಕ್ಕಳು ಕಾನೂನಿನ ಅಂಕೆಗೆ ಒಳಪಡದ ಹಾಸ್ಟೆಲ್‌ಗಳಲ್ಲಿ ವಾಸ ಮಾಡುತ್ತಿದ್ದಾರೆ ಎನ್ನುವ ಸಂಗತಿಯೇ ಅನೇಕ ಪೋಷಕರಿಗೆ ತಿಳಿದಿರುವುದಿಲ್ಲ. (ಮೂವರು ಮಕ್ಕಳ ಸಾವಿಗೆ ಕಾರಣವಾದ ಹುಳಿಯಾರಿನ ವಿದ್ಯಾಸಂಸ್ಥೆಯೂ ವಸತಿನಿಲಯ ನಡೆಸಲಿಕ್ಕೆ ಪರವಾನಗಿ ಪಡೆದಿರಲಿಲ್ಲ).

ಹಾಸ್ಟೆಲ್ ವ್ಯವಸ್ಥೆಯ ಬಗ್ಗೆ ನಿಯಂತ್ರಣ ಇಲ್ಲದಿರುವುದೇ ಇಂದಿನ ಎಲ್ಲ ಸಮಸ್ಯೆಗೂ ಕಾರಣ ಎಂದು ಶಿಕ್ಷಣ ತಜ್ಞ ಪಿ.ವಿ. ನಿರಂಜನಾರಾಧ್ಯ ಅವರು ಹೇಳುತ್ತಾರೆ. “1983ರಲ್ಲಿ ಗುರುಪ್ರಸಾದ್ ಅಧ್ಯಕ್ಷತೆಯ ಸದನ ಸಮಿತಿ ವಿದ್ಯಾರ್ಥಿ ನಿರ್ವಹಣೆಗಳ ಕುರಿತು ಅಧ್ಯಯನ ನಡೆಸಿ, ಅವುಗಳ ನಿರ್ವಹಣೆಗೆ ಪ್ರತ್ಯೇಕ ನಿರ್ದೇಶನಾಲಯ ಸ್ಥಾಪಿಸಬೇಕು ಎಂದು ವರದಿ ಸಲ್ಲಿಸಿತ್ತು. ಹಲವು ಬಗೆಯ ಹಾಸ್ಟೆಲ್‌ಗಳು ಇರುವುದರಿಂದ ಅವುಗಳ ನಿರ್ವಹಣೆಗೆ ಪ್ರತ್ಯೇಕ ನಿರ್ದೇಶನಾಲಯ ಬೇಕು. ಈಗಿನ ವ್ಯವಸ್ಥೆಯಲ್ಲಿ ಹಾಸ್ಟೆಲ್‌ಗಳಿಗೆ ಕೊನೆಯ ಆದ್ಯತೆ ನೀಡಲಾಗುತ್ತದೆ. ವಿದ್ಯಾರ್ಥಿ ನಿಲಯಗಳಲ್ಲಿ ದಿನ ನಿತ್ಯದ ಮೇಲುಸ್ತುವಾರಿ ಅಗತ್ಯ. ದೈನಿಕ ಉಸ್ತುವಾರಿ ಇಲ್ಲದಿದ್ದರೆ ವಾರ್ಡನ್‌ಗಳು ಸರ್ವಾಧಿಕಾರಿಗಳಾಗಿಬಿಡುತ್ತಾರೆ. ಅಲ್ಲಿ ಪಾರದರ್ಶಕತೆ ಇರುವುದಿಲ್ಲ. ಸುಳ್ಳು ಅಟೆಂಡೆನ್ಸ್ ರೂಪಿಸಲಾಗುತ್ತದೆ. ಮಕ್ಕಳಿಗೆ ತಲುಪಬೇಕಾಗಿರುವುದು ತಲುಪುವುದಿಲ್ಲ” ಎಂದವರು ವ್ಯವಸ್ಥೆಯ ಸಿಕ್ಕುಗಳ ಬಗ್ಗೆ ಗಮನಸೆಳೆಯುತ್ತಾರೆ.

“ಯಾವ ಶಿಕ್ಷಣಸಂಸ್ಥೆ ಮಕ್ಕಳಿಗಾಗಿ ವಸತಿನಿಲಯಗಳನ್ನು ಆರಂಭಿಸುತ್ತದೆಯೋ ಅದು ಮಕ್ಕಳ ಪಾಲನೆ ಹಾಗೂ ರಕ್ಷಣೆಗೆ ಸಂಬಂಧಿಸಿದ ‘ಜೆ.ಜೆ. ಆ್ಯಕ್ಟ್’ (juvenile justice act) ಪ್ರಕಾರ ನೋಂದಣಿ ಆಗಬೇಕು. ಆಗ ಮಕ್ಕಳಹಕ್ಕುಗಳ ರಕ್ಷಣೆಯಡಿ ವಿದ್ಯಾರ್ಥಿನಿಲಯಗಳು ಬರುತ್ತವೆ. ಅವುಗಳನ್ನೆಲ್ಲ ಗಮನಿಸಲು, ನಿಯಂತ್ರಿಸಲು ನಮ್ಮಲ್ಲೀಗ ವ್ಯವಸ್ಥೆಯೇ ಇಲ್ಲ. ಪೋಷಕರು ಕೂಡ ಹಾಸ್ಟೆಲ್‌ಗಳ ವ್ಯವಸ್ಥೆಯಲ್ಲಿ ಭಾಗಿಯಾಗಬೇಕು. ಪೋಷಕರನ್ನು ಒಳಗೊಂಡ ಸಮಿತಿಗೆ ಹಾಸ್ಟೆಲ್ ನಿರ್ವಹಣೆಯನ್ನು ಗಮನಿಸುವ ಜವಾಬ್ದಾರಿ ಕೊಡಬೇಕು. ಈ ಸಮಿತಿ ಮೂರು ತಿಂಗಳಿಗೊಮ್ಮೆಯಾದರೂ ಸಭೆ ನಡೆಸಿ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಬೇಕು. ಅನಿರೀಕ್ಷಿತ ಭೇಟಿ, ಪರಿಶೀಲನೆಗೆ ಅವಕಾಶ ಇರಬೇಕು. ಶಾಲಾಭಿವೃದ್ಧಿ ಸಮಿತಿಗಳ ಮಾದರಿಯಲ್ಲಿ, ಪೋಷಕರ ಸಹಭಾಗಿತ್ವ ಒಳಗೊಂಡ ಹಾಸ್ಟೆಲ್ ಸಮಿತಿಗಳು ಕಾರ್ಯ ನಿರ್ವಹಿಸಬೇಕು. ಸಾಮಾಜಿಕ ಲೆಕ್ಕಪತ್ರ ತಪಾಸಣೆ ನಡೆಯಬೇಕು. ಹಾಸ್ಟೆಲ್‌ಗಳು ಸಮುದಾಯಕ್ಕೆ ಜವಾಬ್ದಾರಿಯಾಗಿರಬೇಕು. ಇದೆಲ್ಲ ಆದರೆ ಈಗ ನಡೆಯುತ್ತಿರುವ ಅನಾಹುತಗಳನ್ನು ತಪ್ಪಿಸಬಹುದು” ಎನ್ನುವ ನಿರಂಜನಾರಾಧ್ಯರು, ನಮ್ಮಲ್ಲಿನ ಹಾಸ್ಟೆಲ್ ವ್ಯವಸ್ಥೆಗೆ ಅಕೌಂಟೆಬಿಲಿಟಿಯೇ ಇಲ್ಲ ಎನ್ನುತ್ತಾರೆ.

“ಹಾಸ್ಟೆಲ್‌ಗಳ ಬಗ್ಗೆ ಮೇಲಿಂದ ಮೇಲೆ ದೂರುಗಳು ಕೇಳಿಬರುತ್ತವೆ. ಯಾವ ಹಾಸ್ಟೆಲ್‌ಗೆ ಭೇಟಿ ನೀಡಿದರೂ ಮಕ್ಕಳು ದೂರು ಹೇಳುತ್ತಾರೆ. ಮುಖ್ಯಮಂತ್ರಿಗಳು ಇತ್ತೀಚೆಗೆ ಬೇರೆ ಬೇರೆ ಬೇರೆ ಯೋಜನೆಗಳ ಅಡಿ ಹೊಸ ವಸತಿನಿಲಯಗಳ ಸ್ಥಾಪನೆ ಮಾಡುವುದಾಗಿ ಹೇಳಿದ್ದಾರೆ. ಹಾಸ್ಟೆಲ್‌ಗಳ ಸಮಗ್ರ ಹಾಗೂ ದೀರ್ಘಕಾಲೀನ ಅಭಿವೃದ್ಧಿಗಾಗಿ


BOSCOSS TUTORIALS

*Boscoss Tutorials is a reputed Coaching Institute that offers thorough coaching for the students who is preparing for Annual Board Exams and Medical / Engineering Entrance tests like NEET, CET, COMED-K and JEE-M.*

New
NEET 2018
REPEATERS BATCH
HIGHLIGHTS

- Intensive Coaching
- Over 1000 hours of lectures
- Over 100 Unit Tests
- Over 20 Full length Mock Tests
- Plus many more online Tests
- Excellent, Experienced Faculty
- Individual Attention
- Hostel Facility
- Moderate Fees

Limited Seats... Hurry!

Course starts from Sept. 2017

ADMISSIONS OPEN

OTHER PROGRAMMES :

- I & II PU and XI & XII Classes Syllabus coaching classes in PCMB from June to January
- Summer Vacation Syllabus Coaching in PCMB for II PU & Class XII for local students as well as out-station students from March to May
- NEET / CET CRASH COURSE in October / April.
- Postal Coaching for NEET, JEE & CET

BOSCOSS TUTORIALS
III & IV FLOOR, ESSEL CENTRE,
M. G. ROAD, MANGALURU - 03
Contact : 0824 - 2494537, 4272728
4272729, 99724 58537